ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

46.50

ವಿಷಯ ..... ಪುಟದ ಸಂಖ್ಯೆ -01-

..... ಕಡತದ ಸಂಖ್ಯೆ C&P(P)/WM63/16-17

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ:

ವಿಷಯ: ಪಾಲಿಕೆಯ ವಿವಿಧ ವಲಯಗಳ ವ್ಯಾಪ್ತಿಯ ರಸ್ತೆಗುಂಡಿಗಳನ್ನು ತುರ್ತುಕಾಮಗಾರಿಗಳಡಿಯಲ್ಲಿ 4(ಜಿ) ವಿನಾಯಿತಿಯಲ್ಲಿ ನೇರವಾಗಿ ಅರ್ಹ ಗುತ್ತಿಗೆದಾರರಿಗೆ ವಹಿಸಿ ಮುಚ್ಚಿಸುವ ಕಾಮಗಾರಿಗಳ ಬಿಲ್ ಸಂದಾಯಕ್ಕೆ ಪಾಲಿಕೆಯ ಲಭ್ಯ ಅನುದಾನದಲ್ಲಿ ರೂ.46.50 ಕೋಟಿಗಳನ್ನು ಮೀಸಲಾಗಿಡುವ ಬಗ್ಗೆ

ಉಲ್ಲೇಖ:
1. ಸರ್ಕಾರದ ಅಪರಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಯವರ ಪತ್ರ ಸಂಖ್ಯೆ ನಅಇ 602 ಎಂಎನ್‌ವೈ 2016 ದಿನಾಂಕ 03-10-2016
2. ವಿಶೇಷ ಆಯುಕ್ತರು(ಯೋಜನೆಗಳು)ರವರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ : ವಿಆ(ಯೋ)/ಪಿಆರ್/5790/16-17 ದಿನಾಂಕ 18-10-2016
3. ಆಯುಕ್ತರ ಕಛೇರಿ ಆದೇಶ ಸಂಖ್ಯೆ: ವಿಆ(ಯೋ)/ಪಿಆರ್/5790/16-17 ದಿನಾಂಕ 28-10-2016

(1) ಬೆಂಗಳೂರು ನಗರದಲ್ಲಿ ರಸ್ತೆಗಳ ನಿರ್ವಹಣೆ ಮತ್ತು ಅಭಿವೃದ್ಧಿ ಪಾಲಿಕೆಯ ಜವಾಬ್ದಾರಿಯಾಗಿದ್ದು ರಸ್ತೆಗಳಲ್ಲಿ ಗುಂಡಿಗಳಾದಲ್ಲಿ ತುರ್ತಾಗಿ ಮೇಲೆ ಮುಚ್ಚಿ ಸಾರ್ವಜನಿಕರಿಗೆ ಆಗುತ್ತಿರುವ ಅನಾನುಕೂಲವನ್ನು ಆದ್ಯತೆಯ ಮೇರೆಗೆ ದೂರ ಮಾಡುವ ಜವಾಬ್ದಾರಿ ಪಾಲಿಕೆಯ ಮೇಲಿದೆ.

(2) ಮುಂದುವರೆದು ಪಾಲಿಕೆಯ 2016-17ರ ಆಯವ್ಯಯದಲ್ಲಿ ಕೇಂದ್ರ ವಲಯಗಳ ಪ್ರತಿ ವಾರ್ಡ್‌ಗಳಿಗೂ ರೂ 2.0 ಕೋಟಿ ಮತ್ತು ನೂತನ ವಲಯಗಳಿಗೆ ರೂ. 3.0 ಕೋಟಿಯಂತೆ ವಾರ್ಡ್ ಮಟ್ಟದಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಒದಗಿಸಲಾಗಿರುತ್ತದೆ. ಸದರಿ ಅನುದಾನದ 10 ಪ್ರತಿಶತ ಅನುದಾನವನ್ನು ತುರ್ತು ಕಾಮಗಾರಿಗಳನ್ನು ಕೈಗೊಳ್ಳಲು ಅನುವಾಗುವಂತೆ ಕೆಟಿಪಿಪಿ ಕಾಯ್ದೆಯ 4(ಜಿ) ಪರಿಚ್ಛೇದಕ್ಕೆ ಅನುಗುಣವಾಗಿ ವಿನಾಯಿತಿಯನ್ನು ಪಾಲಿಕೆಯ ಕೋರಿಕೆಯ ಮೇರೆಗೆ ಕರ್ನಾಟಕ ಸರಕಾರವು ಉಲ್ಲೇಖಿತ ಆದೇಶದಂತೆ ನೀಡಿದ್ದು ಪ್ರತಿ ವಾರ್ಡಿಗೆ ಮೀಸಲಾಗಿರುವ ಅನುದಾನದ 10% ಅನುದಾನವನ್ನು ತುರ್ತುಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಗೆ ನೇರವಾಗಿ ವಹಿಸಬಹುದಾಗಿರುತ್ತದೆ. ಮತ್ತು ರಸ್ತೆಗುಂಡಿ ಮುಚ್ಚುವ ಕಾಮಗಾರಿಗಳಿಗೆ ಸದರಿ ತುರ್ತು ಕಾಮಗಾರಿಗಳಲ್ಲಿ ಆದ್ಯತೆ ನೀಡಲು ಸೂಚಿಸಲಾಗಿರುತ್ತದೆ.

(3) ಈ ಹಿನ್ನೆಲೆಯಲ್ಲಿ ಉಲ್ಲೇಖ 3 ರ ಆದೇಶದಂತೆ ಪ್ರತಿ ವಾರ್ಡಿಗೆ ಮೀಸಲಾಗಿರುವ ಅನುದಾನದ 10% ಅನುದಾನವನ್ನು ರಸ್ತೆಗುಂಡಿ ಮುಚ್ಚಿಸುವ ಕಾಮಗಾರಿಗಳಿಗೆ ಪ್ರಥಮ ಆದ್ಯತೆಯೊಂದಿಗೆ ತುರ್ತುಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿದ್ದು ಅರ್ಹ ಗುತ್ತಿಗೆದಾರರಿಗೆ ನೇರವಾಗಿ ಗುತ್ತಿಗೆ ವಹಿಸಲು ಮತ್ತು ಗುಂಡಿ ಮುಚ್ಚುವ ಪ್ರಕ್ರಿಯೆಯನ್ನು ನಿಬಂಧನೆಗಳಿಗೆ ಅನುಗುಣವಾಗಿ ಕಡ್ಡಾಯವಾಗಿ ನಿರ್ವಹಿಸಲು ವಲಯ ಕಾಮಗಾರಿ ಶಾಖೆಗಳ ಎಲ್ಲ ಅಭಿಯಂತರರಿಗೆ ಸೂಚಿಸಲಾಗಿದೆ. ಸದರಿ ಕಾಮಗಾರಿಗಳ ಮೊತ್ತ ಸುಮಾರು ರೂ.46.5 ಕೋಟಿಗಳಷ್ಟಾಗುತ್ತದೆ.

Scanned by CamScanner

ವಿಷಯ : ರೂ.46.50 ಕೋಟಿಗಳನ್ನು ರಸ್ತೆಗುಂಡಿ ಮುಚ್ಚಲು ಮೀಸಲಾಡುವ ಬಗ್ಗೆ

ಪುಟದ ಸಂಖ್ಯೆ -02-

ಕಡತದ ಸಂಖ್ಯೆ ಮೂಲ(ಪ)/4463/16-17

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

(4) ಸದರಿ ರಸ್ತೆ ಗುಂಡಿ ಮುಚ್ಚುವ ಪ್ರಕ್ರಿಯೆಯು ಸಾರ್ವಜನಿಕ ಹಿತದೃಷ್ಟಿಯಿಂದ ತುಂಬ ಪ್ರಮುಖ ಪ್ರಕ್ರಿಯೆಯಾಗಿರುವ ಹಿನ್ನೆಲೆಯಲ್ಲಿ ಲಭ್ಯ ಅನುದಾನದಲ್ಲಿ ಅದ್ಯತೆಯ ಮೇರೆಗೆ ರಸ್ತೆಗುಂಡಿ ಮುಚ್ಚುವ ಕಾಮಗಾರಿಗಳ ಬಿಲ್ ಸಂದಾಯಕ್ಕೆ ವ್ಯವಸ್ಥೆ ಮಾಡಬೇಕಿರುತ್ತದೆ.

(5) ಈ ಹಿನ್ನೆಲೆಯಲ್ಲಿ ಪ್ರಸ್ತುತ ಪಾಲಿಕೆಯಲ್ಲಿ ಲಭ್ಯ ಅನುದಾನದಲ್ಲಿ ರೂ.46.50 ಕೋಟಿಗಳನ್ನು ರಸ್ತೆಗುಂಡಿ ಮುಚ್ಚುವ ಕಾಮಗಾರಿಗಳ ಬಿಲ್ ಸಂದಾಯಕ್ಕೆ ಕಡ್ಡಾಯವಾಗಿ ಮೀಸಲಾಗಿಡಲು ಮತ್ತು ರಸ್ತೆಗುಂಡಿ ಮುಚ್ಚುವ ಬಿಲ್ ಸಂದಾಯವನ್ನು ಯಾವುದೇ ಕಾಲವಿಳಂಬವಿಲ್ಲದಂತೆ ಅದ್ಯತೆಯ ಮೇರೆಗೆ ಪೂರ್ಣಗೊಳಿಸಲು ಪಾಲಿಕೆಯ ಮುಖ್ಯ ಲೆಕ್ಕಾಧಿಕಾರಿಗಳಿಗೆ ಸೂಚಿಸಲು ಕೋರಿದೆ.

5/1/17

ವಿಶೇಷ ಆಯುಕ್ತರು (ಯೋಜನೆ)

(6) ಮಾನ್ಯ ಆಯುಕ್ತರು

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(7) 5/1. ಮುಖ್ಯ (F)

11/1/17

ವಿಶೇಷ ಆಯುಕ್ತರು (ಕಾರ್ಯಾಪು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(8) CAO

ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಆಡಳಿತ ಸಂಖ್ಯೆ 4463
ದಿನಾಂಕ 12/1/17

ಸಂಖ್ಯೆ: ಮೂ(ಪ)/2641/16-17 ದಿನಾಂಕ 11/01/2017 ವಿಶೇಷ ಆಯುಕ್ತರು (ಕಾರ್ಯಾಪು) ರವರ ಕಛೇರಿ

ಸಂಖ್ಯೆ: ಮೂ(ಪ)/4498/16-17 ದಿನಾಂಕ 06/01/2016 ವಿಶೇಷ ಆಯುಕ್ತರು (ಯೋಜನೆ) ರವರ ಕಛೇರಿ

Scanned by CamScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ 03

ಕಡತದ ಸಂಖ್ಯೆ CA9/PR/4403/16-17

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
9)	ಕಂಡಿಕೆ (1) ರಿಂದ (7)ರವರೆಗಿನ ವರದಿಯನ್ನು ಅವಗಾಹನೆಗೆ ತರುತ್ತಾ, ಕಂಡಿಕೆ (5)ರಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ)ರವರು ಪ್ರಸ್ತುತ ಪಾಲಿಕೆಯಲ್ಲಿ ಲಭ್ಯ ಅನುದಾನದಲ್ಲಿ ರೂ.46.50 ಕೋಟಿಗಳನ್ನು ರಸ್ತೆಗುಂಡಿ ಮುಚ್ಚುವ ಕಾಮಗಾರಿಗಳ ಬಿಲ್ ಸಂದಾಯಕ್ಕೆ ಕಡ್ಡಾಯವಾಗಿ ಪ್ರತ್ಯೇಕ ಖಾತೆಯಲ್ಲಿ ಮೀಸಲಾಗಿಡಲು ಮತ್ತು ರಸ್ತೆಗುಂಡಿ ಮುಚ್ಚುವ ಬಿಲ್ ಸಂದಾಯವನ್ನು ಯಾವುದೇ ಕಾಲವಿಳಂಬವಿಲ್ಲದಂತೆ ಆದ್ಯತೆಯ ಮೇರೆಗೆ ಪೂರ್ಣಗೊಳಿಸಲು ಪಾಲಿಕೆಯ ವಿಶೇಷ ಆಯುಕ್ತರು (ಹಣಕಾಸು) ಹಾಗೂ ಮುಖ್ಯ ಲೆಕ್ಕಾಧಿಕಾರಿಗಳಿಗೆ ಸೂಚಿಸಲು ಮಾನ್ಯ ಆಯುಕ್ತರವರಿಗೆ ಕೋರಿರುತ್ತಾರೆ.. ಈ ಸಂಬಂಧ ಕಂಡಿಕೆ (6)ರಲ್ಲಿ ಮಾನ್ಯ ಆಯುಕ್ತರು ಆದೇಶ ಸಂ:ಪಿಎಸ್ಆರ್(ಜಿ)6498/16-17, ದಿನಾಂಕ:06-01-2017ರಂದು ಆದೇಶಿಸಿರುತ್ತಾರೆ. ಮೇಲಿನ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ, ಈ ಬಗ್ಗೆ ಮುಂದಿನ ಆದೇಶ ಮತ್ತು ಸೂಕ್ತ ನಿರ್ದೇಶನ ಕೋರಿದೆ. ಲೆಕ್ಕ ಅಧೀಕ್ಷಕರು-3
10)	
11)	ಉ.ನಿ(ಹ)
12	AO
13)	ಕಂಡಿಕೆ (5)ರಲ್ಲಿ ತಿಳಿಸಿರುವಂತೆ ಮಾನ್ಯ ವಿಶೇಷ ಆಯುಕ್ತರು (ಯೋಜನೆ)ರವರು ರಸ್ತೆಗುಂಡಿ ಮುಚ್ಚುವ ಕಾಮಗಾರಿಗಳ ಬಿಲ್ ಸಂದಾಯಕ್ಕೆ ಕಡ್ಡಾಯವಾಗಿ ಪ್ರತ್ಯೇಕ ಖಾತೆಯಲ್ಲಿ ಮೀಸಲಾಗಿಡಲು ಹಾಗೂ ರಸ್ತೆಗುಂಡಿ ಮುಚ್ಚುವ ಬಿಲ್ ಸಂದಾಯವನ್ನು ಯಾವುದೇ ಕಾಲವಿಳಂಬವಿಲ್ಲದಂತೆ ಆದ್ಯತೆಯ ಮೇರೆಗೆ ಪೂರ್ಣಗೊಳಿಸಲು ಕ್ರಮಕೈಗೊಳ್ಳುವಂತೆ ಪ್ರಸ್ತಾಪಿಸಿದ್ದು, ಸದರಿ ಪ್ರಸ್ತಾವನೆಗೆ ಕಂಡಿಕೆ (6)ರಲ್ಲಿ ಮಾನ್ಯ ಆಯುಕ್ತರು ಅನುಮೋದನೆ ನೀಡಿರುತ್ತಾರೆ.
14)	• ಬ್ಯಾಂಕ್ ಖಾತೆ ತೆರೆಯುವ ಸಂಬಂಧ ಸರ್ಕಾರವು ಹೊಸದಾಗಿ ಆದೇಶ ಹೊರಡಿಸಿದ್ದು, ಅದರಂತೆ ಅನಿವಾರ್ಯವಾಗಿ ಹೊಸದಾಗಿ ಬ್ಯಾಂಕ್ ಖಾತೆಗಳನ್ನು ತೆರೆಯಬೇಕಾದಲ್ಲಿ ಪಾಲಿಕೆಯ ಕೌನ್ಸಿಲ್ ಅನುಮೋದನೆ ಪಡೆಯುವುದು ಅವಶ್ಯಕವಾಗಿರುತ್ತದೆ.

Scanned by CamScanner

ವಿಷಯ :- ರೂ. 46.50 ಕೋಟಿಗಳನ್ನು ರಸ್ತೆಗುಂಡಿ ಮುಚ್ಚಲು ಮೀಸಲಿಡುವ ಬಗ್ಗೆ

ಪುಟದ ಸಂಖ್ಯೆ 04

ಕಡತದ ಸಂಖ್ಯೆ C(0)PR/1463/16-17

ಪಂಕ್ತಿಯ ಸಂಖ್ಯೆ	ಟಪ್ಪಣಿಗಳು ಮತ್ತು ಆಜ್ಞೆಗಳು
15	• 2016–17ನೇ ಸಾಲಿನ ಆಯವ್ಯಯದ ಅನುದಾನದಲ್ಲಿ (ಲೆಕ್ಕಶೀರ್ಷಿಕೆ : ಪಿ–1771) 4(ಜಿ) ವಿನಾಯಿತಿ ಪಡೆದು ನಿರ್ವಹಿಸಿರುವ ರೂ.46.50 ಕೋಟಿಗಳ ರಸ್ತೆಗುಂಡಿ ಮುಚ್ಚುವ ಕಾಮಗಾರಿಗಳಿಗೆ ಸಂಬಂಧಿಸಿದ ಬಿಲ್‌ಗಳನ್ನು ತುರ್ತಾಗಿ ಪಾವತಿ ಮಾಡಬೇಕಾದಲ್ಲಿ ಐ.ಎಫ್.ಎಂ.ಎಸ್. ತಂತ್ರಾಂಶದಲ್ಲಿ ಪ್ರತ್ಯೇಕ Category ಯನ್ನು ಅಳವಡಿಸಿ, ಪಾಲಿಕೆಯ ಅನುದಾನದಿಂದ ಪಾವತಿಸಬೇಕಾಗಿರುತ್ತದೆ.
	ಅಥವಾ
16	• ಸದರಿ ಕಾಮಗಾರಿಗಳು 2016–17ನೇ ಸಾಲಿನ ಆಯವ್ಯಯದ ಅನುದಾನದಲ್ಲಿ (ಲೆಕ್ಕಶೀರ್ಷಿಕೆ : ಪಿ–1771) 4(ಜಿ) ವಿನಾಯಿತಿ ಪಡೆದು ನಿರ್ವಹಿಸಿರುವ ರೂ46.50 ಕೋಟಿಗಳ ಮೊತ್ತಕ್ಕೆ ಮಾತ್ರ ಸಂಬಂಧಿಸಿದ್ದು, ಇದಕ್ಕೆ ಪ್ರತ್ಯೇಕ Category ಯನ್ನು ಅಳವಡಿಸುವ ಬದಲು ತುರ್ತು ಪಾವತಿಗೆ ಹಾಲಿಯಿರುವ Commissioner Order Category ಯಡಿಯಲ್ಲಿ ಪಾವತಿಗೆ ಕ್ರಮವಹಿಸಬಹುದಾಗಿರುತ್ತದೆ. ಈ ರೀತಿ ಪಾವತಿ ಮಾಡಿದ ಪಕ್ಷದಲ್ಲಿ ಹೊಸದಾಗಿ ಬ್ಯಾಂಕ್ ಖಾತೆ ತೆರೆಯುವ ಅವಶ್ಯಕತೆಯಿರುವುದಿಲ್ಲ.
	ಈ ಮೇಲಿನ ಅಂಶಗಳ ಬಗ್ಗೆ ಆದೇಶ ಕೋರಿದೆ.
	ಮುಖ್ಯ ಲೆಕ್ಕಾಧಿಕಾರಿಗಳು ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೆಂಗಳೂರು.
17	ಮಾನ್ಯ ವಿಶೇಷ ಆಯುಕ್ತರು (ಹಣಕಾಸು)
	ಶಿಂಡಿಕೆ 14ನೇ ಅನುಚ್ಛೇದದ ರೂ. 46.50 ಕೋಟಿ, ಮೊತ್ತಕ್ಕೆ ಸೀಮಿತಗೊಳಿಸಿ, ಉಳಿದ ಪ್ರತ್ಯೇಕ ಕಾಮಗಾರಿಗಳಿಗೆ ಲೆಕ್ಕಶೀರ್ಷಿಕೆ ಬದಲಿಸಿ ಪಾವತಿಗೆ ಕ್ರಮವಹಿಸಲು ಮನವಿ (Commissioner Order Category)
	19/4/17 ವಿಶೇಷ ಆಯುಕ್ತರು (ಹಣಕಾಸು) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
18	ಚಿತ್ರ ಯಾವುದೇ ಕಾಗ
	COMMISSIONER Bruhat Bangalore Mahanagara Palike.
19	Spl. Comm (F)
	21/4 ವಿಶೇಷ ಆಯುಕ್ತರು (ಹಣಕಾಸು) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
20	C-A-O)

ಸಂಖ್ಯೆ: ಆ ಆ(ಹ)ಮಿ(ಪಿ–1771)/2017-18 ದಿನಾಂಕ: 20.04.2017

ವಿಶೇಷ ಆಯುಕ್ತರು (ಹಣಕಾಸು) ಇವರಿಗೆ

ಮುಖ್ಯ ಲೆಕ್ಕಾಧಿಕಾರಿಗಳು ಇವರ ಟಿಪ್ಪಣಿ ದಿನಾಂಕ: 19.04.2017 ರಲ್ಲಿನ ಪಂಕ್ತಿ ಸಂಖ್ಯೆ 15 ಮತ್ತು 16 ರಲ್ಲಿ ಕೋರಿರುವಂತೆ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ

ಸದರಿ ಕಾಮಗಾರಿಗಳು 2016–17ನೇ ಸಾಲಿನ ಆಯವ್ಯಯದ ಅನುದಾನದಲ್ಲಿ (ಲೆಕ್ಕಶೀರ್ಷಿಕೆ : ಪಿ–1771) 4(ಜಿ) ವಿನಾಯಿತಿ ಪಡೆದು ನಿರ್ವಹಿಸಿರುವ ರೂ46.50 ಕೋಟಿಗಳ ಮೊತ್ತಕ್ಕೆ ಮಾತ್ರ ಸಂಬಂಧಿಸಿದ್ದು, ಇದಕ್ಕೆ ಪ್ರತ್ಯೇಕ Category ಯನ್ನು ಅಳವಡಿಸುವ ಬದಲು ತುರ್ತು ಪಾವತಿಗೆ ಹಾಲಿಯಿರುವ Commissioner Order Category ಯಡಿಯಲ್ಲಿ ಪಾವತಿಗೆ ಕ್ರಮವಹಿಸಲು ಆದೇಶಿಸಿದೆ.

ಆಯುಕ್ತರು (ಹಣಕಾಸು)

Scanned by CamScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ರೂ. 46.50 ಕೋಟಿ ರಸ್ತೆಗುಂಡಿ ಮುಚ್ಚುವ ಕಾಮಗಾರಿಗಳ ಅನುಮತಿ ಬಗ್ಗೆ. ಪುಟದ ಸಂಖ್ಯೆ -05-

ಕಡತದ ಸಂಖ್ಯೆ CAO/DR/4463/16-17

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಸಂಖ್ಯೆ: ಆಆ(ಹ)/ಡಿ.ಕೆ.ಆರ್/13-14 ದಿನಾಂಕ: 20/04/2017 ವಿಶೇಷ ಆಯುಕ್ತರು (ಹಣಕಾಸು) ರವರ ಕಛೇರಿ

ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಆಪಪಾಲು ಸಂಖ್ಯೆ 315
ದಿನಾಂಕ 20/4/17

ಕಂಡಿಕೆ

- ಪಾಲಿಕೆಯ ವಿವಿಧ ವಲಯಗಳ ವ್ಯಾಪ್ತಿಯ ರಸ್ತೆ ಗುಂಡಿಗಳನ್ನು ಮುಚ್ಚುವ ತುರ್ತು ಕಾಮಗಾರಿಗಳನ್ನು 4 ಜಿ ವಿನಾಯಿತಿಯಲ್ಲಿ ನೇರವಾಗಿ ಅರ್ಹ ಗುತ್ತಿಗೆದಾರರಿಗೆ ವಹಿಸಿ ಸದರಿ ಕಾಮಗಾರಿಗಳ ಬಿಲ್ ಸಂದಾಯಕ್ಕೆ ರೂ.46.50 ಕೋಟಿ ಅನುದಾನವನ್ನು ಮೀಸಲಿರಿಸಿ, ಪಾವತಿಸಲು ಸಲ್ಲಿಸಿರುವ ಪ್ರಸ್ತಾವನೆಗೆ ಕಂಡಿಕೆ (6)ರಲ್ಲಿ ಮಾನ್ಯ ಆಯುಕ್ತರು ಅನುಮೋದನೆ ನೀಡಿರುತ್ತಾರೆ.
- ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (17)ರಲ್ಲಿ ಮಾನ್ಯ ವಿಶೇಷ ಆಯುಕ್ತರು (ಹಣಕಾಸು) ರವರು ಬಿಲ್ಲುಗಳನ್ನು ಪಾವತಿಸಲು CAO/Spl.Com.(F) ರವರಿಗೆ ಸೂಚನೆ ನೀಡಬಹುದಾಗಿದೆ ಎಂಬ ಶಿಫಾರಸ್ಸನ್ನು ಮಾನ್ಯ ಆಯುಕ್ತರು ಕಂಡಿಕೆ (18)ರಲ್ಲಿ ಅನುಮೋದಿಸಿರುತ್ತಾರೆ.
- 4 ಜಿ ವಿನಾಯಿತಿಯಡಿಯಲ್ಲಿನ ರಸ್ತೆ ಗುಂಡಿ ಮುಚ್ಚುವ ಕಾಮಗಾರಿಗಳ ಪ್ರತಿ ಕಡತವನ್ನು ವಿಶೇಷ ಆಯುಕ್ತರು (ಹಣಕಾಸು)ರವರಿಗೆ ಪ್ರತಿ ಬಾರಿ ಅನುಮೋದನೆಗಾಗಿ ಸಲ್ಲಿಸಲಾಗುತ್ತಿರುತ್ತದೆ. ಕಂಡಿಕೆ (6)ರಲ್ಲಿ ಮಾನ್ಯ ಆಯುಕ್ತರು ಅನುಮೋದಿಸಿರುವಂತೆ ಮಾನ್ಯ ವಿಶೇಷ ಆಯುಕ್ತರು (ಹಣಕಾಸು)ರವರ ಹಂತದಲ್ಲಿಯೇ ಸದರಿ ಕಡತಗಳನ್ನು ಪರಿಶೀಲಿಸಿ, ಮೆ.ವಲ್ಲಭ್ ಸಾಪ್ಟ್‌ವೇರ್ ಸಲ್ಯೂಷನ್ಸ್ ರವರಿಗೆ Commissioner order category ಅಡಿಯಲ್ಲಿ ಭಿತ್ತರಿಸಿ, ಗುತ್ತಿಗೆದಾರರಿಗೆ ಪಾವತಿಸಲು ಅನುಮೋದನೆಗಾಗಿ ಸಲ್ಲಿಸಿದೆ.

ಅಥವಾ

20 'A1' • ಮುಖ್ಯ ಲೆಕ್ಕಾಧಿಕಾರಿರವರ ಹಂತದಲ್ಲಿಯೇ ಸದರಿ ಕಡತಗಳನ್ನು ಪರಿಶೀಲಿಸಿ, ಮೆ.ವಲ್ಲಭ್ ಸಾಪ್ಟ್‌ವೇರ್ ಸಲ್ಯೂಷನ್ಸ್ ರವರಿಗೆ Commissioner order category ಅಡಿಯಲ್ಲಿ ಭಿತ್ತರಿಸಿ, ಗುತ್ತಿಗೆದಾರರಿಗೆ ಪಾವತಿಸಲು ಅನುಮೋದನೆಗಾಗಿ ಸಲ್ಲಿಸಿದೆ. 'A1'

ಮುಖ್ಯ ಲೆಕ್ಕಾಧಿಕಾರಿಗಳು

ಮಾನ್ಯ ವಿಶೇಷ ಆಯುಕ್ತರು (ಹಣಕಾಸು)

May approve para 20 'A1' for kind order

15/5/17

22) Hon. comm.

16/05/17

ಪು.ತಿ.ನೋ

Scanned by CamScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಆಯುಕ್ತರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು–02

ಸಂ: ವಿಆ(ಯೋ)/ಪಿಆರ್/5790/16–17 ದಿನಾಂಕ:28–10–2016

ಕಛೇರಿ ಆದೇಶ

ವಿಷಯ: ಪಾಲಿಕೆಯ ವಿವಿಧ ವಲಯಗಳ ವ್ಯಾಪ್ತಿಯ ರಸ್ತೆಗುಂಡಿಗಳನ್ನು ತುರ್ತುಕಾಮಗಾರಿಗಳಡಿಯಲ್ಲಿ ಅರ್ಹ ಗುತ್ತಿಗೆದಾರರಿಗೆ 4(ಜಿ) ವಿನಾಯಿತಿಯಲ್ಲಿ ನೇರವಾಗಿ ವಹಿಸಿ ಮುಚ್ಚಿಸುವ ಪ್ರಕ್ರಿಯೆ

ಉಲ್ಲೇಖ: 1. ಸರ್ಕಾರದ ಅಪರಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಯವರ ಪತ್ರ ಸಂಖ್ಯೆ ನಅಇ 602 ಎಂಎನ್‌ವೈ 2016 ದಿನಾಂಕ 03–10–2016
2. ವಿಶೇಷ ಆಯುಕ್ತರು(ಯೋಜನೆಗಳು)ರವರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ : ವಿಆ(ಯೋ)/ಪಿಆರ್/5790/16–17 ದಿನಾಂಕ 18–10–2016

ಬೆಂಗಳೂರು ನಗರದಲ್ಲಿ ಸುಮಾರು 13,000 ಕಿ.ಮೀ. ನಷ್ಟು ರಸ್ತೆಗಳು ಪಾಲಿಕೆಯ ವಿವಿಧ ವಲಯಗಳ ವ್ಯಾಪ್ತಿಯಲ್ಲಿ ಇದ್ದು ಸದರಿ ರಸ್ತೆಗಳ ನಿರ್ವಹಣೆ ಮತ್ತು ಅಭಿವೃದ್ಧಿ ಪಾಲಿಕೆಯ ಜವಾಬ್ದಾರಿಯಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಸದರಿ ರಸ್ತೆಗಳ ಕೆಲವು ಭಾಗಗಳಲ್ಲಿ ರಸ್ತೆಗುಂಡಿಗಳು ಮತ್ತು ಹಾಳಾದ ಮೇಲ್ಪೈಗಳ ಬಗ್ಗೆ ಕಟು ವಿಮರ್ಶೆಯನ್ನು ದೃಶ್ಯ ಮತ್ತು ಮುದ್ರಣ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಮಾಡಲಾಗುತ್ತಿದೆ. ಇದರಿಂದಾಗಿ ಸದರಿ ರಸ್ತೆ ಗುಂಡಿಗಳನ್ನು ತುರ್ತಾಗಿ ಮೇಲೆ ಮುಚ್ಚಿ ಸಾರ್ವಜನಿಕರಿಗೆ ಆಗುತ್ತಿರುವ ಅನಾನುಕೂಲವನ್ನು ಆದ್ಯತೆಯ ಮೇರೆಗೆ ದೂರ ಮಾಡುವ ಜವಾಬ್ದಾರಿ ಪಾಲಿಕೆಯ ಮೇಲಿದೆ.

ಪಾಲಿಕೆಯ 2016–17ರ ಆಯವ್ಯಯದಲ್ಲಿ ಕೇಂದ್ರ ವಲಯಗಳ ಪ್ರತಿ ವಾರ್ಡ್‌ಗಳಿಗೂ ರೂ 2.0 ಕೋಟಿ ಮತ್ತು ನೂತನ ವಲಯಗಳಿಗೆ ರೂ. 3.0 ಕೋಟಿಯಂತೆ ವಾರ್ಡ್ ಮಟ್ಟದಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಒದಗಿಸಲಾಗಿರುತ್ತದೆ. ಸದರಿ ಅನುದಾನದ 10 ಪ್ರತಿಶತ ಅನುದಾನವನ್ನು ತುರ್ತು ಕಾಮಗಾರಿಗಳನ್ನು ಕೈಗೊಳ್ಳಲು ಅನುವಾಗುವಂತೆ ಕೆಟಿಪಿಪಿ ಕಾಯ್ದೆಯ 4(ಜಿ) ಪರಿಚ್ಛೇದಕ್ಕೆ ಅನುಗುಣವಾಗಿ ವಿನಾಯಿತಿಯನ್ನು ಪಾಲಿಕೆಯ ಕೋರಿಕೆಯ ಮೇರೆಗೆ ಕರ್ನಾಟಕ ಸರಕಾರವು ಉಲ್ಲೇಖಿತ ಆದೇಶದಂತೆ ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿ ವಾರ್ಡಿಗೆ ಮೀಸಲಾಗಿರುವ ಅನುದಾನದ 10% ಅನುದಾನವನ್ನು ತುರ್ತುಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಗೆ ನೇರವಾಗಿ ವಹಿಸಬಹುದಾಗಿರುತ್ತದೆ. ಮತ್ತು ರಸ್ತೆಗುಂಡಿ ಮುಚ್ಚುವ ಕಾಮಗಾರಿಗಳಿಗೆ ಸದರಿ ತುರ್ತು ಕಾಮಗಾರಿಗಳಲ್ಲಿ ಆದ್ಯತೆ ನೀಡಲು ಸೂಚಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪ್ರತಿ ವಾರ್ಡಿಗೆ ಮೀಸಲಾಗಿರುವ ಅನುದಾನದ **10% ಅನುದಾನವನ್ನು ರಸ್ತೆಗುಂಡಿ ಮುಚ್ಚಿಸುವ ಕಾಮಗಾರಿಗಳಿಗೆ ಪ್ರಥಮ ಆದ್ಯತೆಯೊಂದಿಗೆ ತುರ್ತುಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿದೆ ಮತ್ತು ಅರ್ಹ ಗುತ್ತಿಗೆದಾರರಿಗೆ ನೇರವಾಗಿ ಗುತ್ತಿಗೆ ವಹಿಸಲು ಈ ಮೂಲಕ ಎಲ್ಲ ವಲಯಗಳ ಕಾರ್ಯಪಾಲಕ ಅಭಿಯಂತರರಿಗೆ ಅಧಿಕಾರ ನೀಡಲಾಗಿದೆ.** ಅಲ್ಲದೇ ಸದರಿ ಪ್ರಕ್ರಿಯೆಯನ್ನು ಕೆಳಗೆ ಪಟ್ಟಿ ಮಾಡಿದ ನಿಬಂಧನೆಗಳಿಗೆ ಅನುಗುಣವಾಗಿ ಕಡ್ಡಾಯವಾಗಿ ನಿರ್ವಹಿಸಲು ವಲಯ ಕಾಮಗಾರಿ ಶಾಖೆಗಳ ಎಲ್ಲ ಅಭಿಯಂತರರಿಗೆ ಸೂಚಿಸಲಾಗಿದೆ.

Scanned by CamScanner

1. ಪ್ರತಿ ವಾರ್ಡಿನ ಎಲ್ಲ ರಸ್ತೆಗಳಲ್ಲಿ ಇರುವ ಎಲ್ಲ ರಸ್ತೆಗುಂಡಿಗಳನ್ನು ಪ್ರತಿ ರಸ್ತೆಗುಂಡಿಯ ನಿಖರ ನೆಲೆಯನ್ನು ವಿಳಾಸಸಹಿತ ನಮೂದಿಸುವ ಮೂಲಕ ಸ್ಥಳ ಪರಿಶೀಲನೆ ಮಾಡಿ ಪಟ್ಟಿಮಾಡತಕ್ಕದ್ದು. ಪಾಲಿಕೆಯ ರಸ್ತೆಗುಂಡಿ ಆ್ಯಪ್‌ನಲ್ಲಿ ಈ ಎಲ್ಲ ರಸ್ತೆಗುಂಡಿಗಳ Geotagged ಛಾಯಾಚಿತ್ರವನ್ನು ಅಪ್‌ಲೋಡ್ ಮಾಡತಕ್ಕದ್ದು.

(ಹೊಣೆಗಾರಿಕೆ: ವಲಯಗಳ ಸಹಾಯಕ/ಕಿರಿಯ ಅಭಿಯಂತರರು, ಮೇಲುಸ್ತುವಾರಿ: ವಲಯಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು)

2. ಹೀಗೆ ತಯಾರಿಸಿದ ಎಲ್ಲ ಸದರಿ ರಸ್ತೆಗುಂಡಿಗಳ ಪಟ್ಟಿಯನ್ನು ದೋಷ ಬಾಧ್ಯತಾ ಅವಧಿಯಲ್ಲಿರುವ ರಸ್ತೆಗಳು, ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳು, ನಗರೋತ್ಥಾನ ಅನುದಾನದಲ್ಲಿ ಅಭಿವೃದ್ಧಿಪಡಿಸುತ್ತಿರುವ ರಸ್ತೆಗಳು, 14ನೇ ಹಣಕಾಸು ಆಯೋಗದ ಅನುದಾನದಲ್ಲಿ ಅಭಿವೃದ್ಧಿಪಡಿಸುತ್ತಿರುವ ರಸ್ತೆಗಳು, ಎಸ್.ಎಫ್.ಸಿ ಅನುದಾನ ಅಥವಾ ಇನ್ಯಾವುದೇ ಅನುದಾನದಲ್ಲಿ ಅಭಿವೃದ್ಧಿಪಡಿಸುತ್ತಿರುವ ರಸ್ತೆಗಳಲ್ಲಿರುವ ರಸ್ತೆಗುಂಡಿಗಳನ್ನು ಕೈಬಿಡತಕ್ಕದ್ದು ಮತ್ತು ಸದರಿ ರಸ್ತೆಗಳ ರಸ್ತೆಗುಂಡಿಗಳನ್ನು ಆಯಾ ರಸ್ತೆ ಕಾಮಗಾರಿಯ ಗುತ್ತಿಗೆದಾರರಿಂದಲೇ ಮುಚ್ಚಿಸತಕ್ಕದ್ದು.

(ಹೊಣೆಗಾರಿಕೆ: ವಲಯಗಳ ಸಹಾಯಕ/ಕಿರಿಯ ಅಭಿಯಂತರರು, ಮೇಲುಸ್ತುವಾರಿ: ವಲಯಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು)

3. ಗುಂಡಿ ಮುಚ್ಚುವ ಪೂರ್ವದ ಮತ್ತು ನಂತರದ ಛಾಯಾಚಿತ್ರಗಳನ್ನು ಗುಂಡಿಯ ಸ್ಥಳ, ರಸ್ತೆ ಮತ್ತು ಗುಂಡಿಮುಚ್ಚಿದ ದಿನದ ವಿವರಗಳೊಂದಿಗೆ ಪಾಲಿಕೆಯ ಜಾಲತಾಣದಲ್ಲಿ ವಾರ್ಡ್‌ವಾರು ಪ್ರಕಟಿಸತಕ್ಕದ್ದು.

(ಹೊಣೆಗಾರಿಕೆ: ವಲಯಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಕಾರ: ಐಟಿ ಶಾಖೆ)

4. ಉಳಿದಂತೆ ಇತರ ರಸ್ತೆಗಳಲ್ಲಿರುವ ರಸ್ತೆಗುಂಡಿಗಳನ್ನು ತುರ್ತಾಗಿ 4(ಜಿ) ವಿನಾಯಿತಿಯಲ್ಲಿ ಮುಚ್ಚಿಸಲು ಅಂದಾಜು ಪಟ್ಟಿಯನ್ನು ತಯಾರಿಸತಕ್ಕದ್ದು.

(ಹೊಣೆಗಾರಿಕೆ: ವಲಯಗಳ ಸಹಾಯಕ/ಕಿರಿಯ ಅಭಿಯಂತರರು, ಮೇಲುಸ್ತುವಾರಿ: ವಲಯಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು)

5. ಪ್ರತ್ಯಾಯೋಜಿತ ಅಧಿಕಾರದಂತೆ ಆಡಳಿತಾತ್ಮಕ ಅನುಮೋದನೆ ಟಿಪ್ಪಣಿ ಮತ್ತು ತಾಂತ್ರಿಕ ಮಂಜೂರಾತಿ ನೀಡತಕ್ಕದ್ದು.

(ಹೊಣೆಗಾರಿಕೆ: ವಲಯಗಳ ಕಾರ್ಯಪಾಲಕ ಅಭಿಯಂತರರು/ಮುಖ್ಯ ಅಭಿಯಂತರರು/ಜಂಟಿ ಆಯುಕ್ತರು)

6. ಗುಂಡಿಮುಚ್ಚುವ ಅಥವಾ ಇತರ ಯಾವುದೇ ಕಾಮಗಾರಿಗಳನ್ನು ವಹಿಸುವಾಗ ಅಗತ್ಯ ಸಲಕರಣೆ, ಯಂತ್ರಗಳು ಮತ್ತು ವಾಹನಗಳನ್ನು ಹೊಂದಿರುವ ಮತ್ತು ಈ ಹಿಂದೆ ಇಂತಹ ಕಾಮಗಾರಿಗಳನ್ನು ನಿರ್ವಹಿಸಿ ನೈಪುಣ್ಯತೆ ಪಡೆದಿರುವ ಹಾಗೂ ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಆರ್ಥಿಕ ಅರ್ಹತೆ ಮತ್ತು ಇತರ ಷರತ್ತುಗಳಿಗೆ ಅರ್ಹತೆಗಳನ್ನು ಹೊಂದಿರುವ ಗುತ್ತಿಗೆದಾರರಿಗೆ ಮಾತ್ರ ಸಮಂಜಸ ದರದಲ್ಲಿ ವಹಿಸಲು ಸೂಚಿಸಿದೆ. ಸದರಿ ಗುತ್ತಿಗೆದಾರರಿಗೆ ನೀಡಿರುವ ಕಾರ್ಯಾದೇಶಗಳ ಪ್ರತಿಯನ್ನು, ಮುಚ್ಚಬೇಕಾದ ರಸ್ತೆಗುಂಡಿಗಳ ನಿಖರವಾದ ವಿವರದೊಂದಿಗೆ ಮತ್ತು ತಾಂತ್ರಿಕ ಮಂಜೂರಾತಿ ನೀಡಿರುವ ಅಂದಾಜುಪಟ್ಟಿಯೊಂದಿಗೆ ಪಾಲಿಕೆಯ ಜಾಲತಾಣದಲ್ಲಿ ವಾರ್ಡ್‌ವಾರು ಪ್ರಕಟಿಸತಕ್ಕದ್ದು.

Scanned by CamScanner

(ಹೊಣೆಗಾರಿಕೆ: ವಲಯಗಳ ಕಾರ್ಯಪಾಲಕ ಅಭಿಯಂತರರು ಸಹಕಾರ: ಐಟಿ ಶಾಖೆ)

7. ಸದರಿ ಕಾಮಗಾರಿಗಳನ್ನು ಯಾವುದೇ ಸಂದರ್ಭದಲ್ಲಿ ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸತಕ್ಕದ್ದಲ್ಲ ಮತ್ತು ಅಂತಹ ಪ್ರಸ್ತಾವನೆಗಳನ್ನು ಸಹ ಮೇಲಧಿಕಾರಿಗಳಿಗೆ ಸಲ್ಲಿಸತಕ್ಕದ್ದಲ್ಲ.
(ಹೊಣೆಗಾರಿಕೆ: ವಲಯಗಳ ಕಾರ್ಯಪಾಲಕ ಅಭಿಯಂತರರು ಮೇಲುಸ್ತುವಾರಿ: ವಲಯ ಮುಖ್ಯ ಅಭಿಯಂತರರು)

8. ರಸ್ತೆಗುಂಡಿಗಳನ್ನು IRC-82 ಮತ್ತು MOST ವಿಶೇಷ ವಿವರಣೆಯಂತೆ ಮುಚ್ಚಿಸತಕ್ಕದ್ದು. ಮತ್ತು ಗುಣಮಟ್ಟ ಪರೀಕ್ಷೆಗಳನ್ನು ತಪ್ಪದೇ ಮಾಡತಕ್ಕದ್ದು.
(ಹೊಣೆಗಾರಿಕೆ: ವಲಯಗಳ ಸಹಾಯಕ/ಕಿರಿಯ ಅಭಿಯಂತರರು, ಮೇಲುಸ್ತುವಾರಿ: ವಲಯಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು)

9. ಅಂದಾಜು ಪಟ್ಟಿ ತಯಾರಿಸುವಾಗ ಪ್ರಸ್ತುತ ರಸ್ತೆಗಳಲ್ಲಿ ಅಸ್ತಿತ್ವದಲ್ಲಿರುವ ಮತ್ತು ಇತರ ಯಾವುದೇ ಮೂಲಗಳಿಂದ (ನಗರೋತ್ಥಾನ, ಎಸ್.ಎಫ್.ಸಿ. ದೋಷ ಬಾಧ್ಯತಾ ಅವಧಿ (DLP) ಇತ್ಯಾದಿ) ಮುಚ್ಚಲು ಸಾಧ್ಯವಿಲ್ಲದ ರಸ್ತೆಗುಂಡಿಗಳನ್ನು ಮುಚ್ಚಲು ಮಾತ್ರ ಸೀಮಿತವಾಗಿ ಅಂದಾಜುಪಟ್ಟಿ ತಯಾರಿಸತಕ್ಕದ್ದು.

ಭವಿಷ್ಯದಲ್ಲಿ ಯಾವುದೇ ರಸ್ತೆಗುಂಡಿ ನಿರ್ಮಾಣವಾಗುವುದನ್ನು ನಿರೀಕ್ಷಿಸಿ ಅಂದಾಜುಪಟ್ಟಿಯಲ್ಲಿ ಸೇರಿಸುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ.
(ಹೊಣೆಗಾರಿಕೆ: ವಲಯಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರು ಮೇಲುಸ್ತುವಾರಿ: ವಲಯ ಮುಖ್ಯ ಅಭಿಯಂತರರು)

10. ಈ ಎಲ್ಲ ರಸ್ತೆಗುಂಡಿಗಳನ್ನು ದಿನಾಂಕ: 09-11-2016ರ ಒಳಗೆ ಉತ್ತಮ ಗುಣಮಟ್ಟದ ಕಾಮಗಾರಿ ನಿರ್ವಹಿಸಿ ಮುಚ್ಚಲು ಕ್ರಮ ವಹಿಸುವುದು.
(ಹೊಣೆಗಾರಿಕೆ: ವಲಯಗಳ ಸಹಾಯಕ/ಕಿರಿಯ ಅಭಿಯಂತರರು, ಮೇಲುಸ್ತುವಾರಿ: ವಲಯಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು)

11. ಸಂಬಂಧಪಟ್ಟ ವಲಯ ಮುಖ್ಯ ಅಭಿಯಂತರರು ಸದರಿ ಪ್ರಕ್ರಿಯೆಯ ಮೇಲುಸ್ತುವಾರಿ ವಹಿಸಿ ಆಯಾ ವಲಯ ವ್ಯಾಪ್ತಿಗೆ ಒಳಪಡುವ ಎಲ್ಲ ರಸ್ತೆಗಳ ರಸ್ತೆಗುಂಡಿಗಳನ್ನು (ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳನ್ನು ಮಾತ್ರ ಹೊರತುಪಡಿಸಿ) ನಿರ್ದಿಷ್ಟ ಅವಧಿಯೊಳಗೆ ಮುಚ್ಚಿಸುವ ಜವಾಬ್ದಾರಿ ಮತ್ತು ಈ ಬಗ್ಗೆ ಪ್ರತಿ ಎರಡು ದಿನಕ್ಕೊಮ್ಮೆ ಪ್ರಧಾನ ಅಭಿಯಂತರಿಗೆ ಕೈಗೊಳ್ಳುತ್ತಿರುವ ಕ್ರಮಗಳ ಬಗ್ಗೆ ವಾರ್ಡ್‌ವಾರು ವರದಿ ಒಪ್ಪಿಸುವಂತೆ ಸೂಚಿಸಿದೆ.

12. ಈ ಪ್ರಕ್ರಿಯೆಯಲ್ಲಿ ವಲಯ ವ್ಯಾಪ್ತಿಯ ಕಛೇರಿಗಳಿಗೆ ಮೇಲಿನಂತೆ ಕರ್ತವ್ಯ ನಿರ್ವಹಿಸಲು ಅಗತ್ಯ ಸಹಕಾರವನ್ನು ಒದಗಿಸಲು ಪಾಲಿಕೆಯ ಐಟಿ ಶಾಖೆಗೆ ಸೂಚಿಸಿದೆ.

Scanned by CamScanner

13. ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಪ್ರತಿ ಉಪವಿಭಾಗಕ್ಕೆ ಸೀಮಿತವಾಗಿ ಕಾಮಗಾರಿ ಸಂಖ್ಯೆ ಪ್ರಮಾಣಪತ್ರ ನೀಡಲು ಆರ್ಥಿಕ ಶಾಖೆಗೆ ಸೂಚಿಸಿದೆ. ಇದಕ್ಕಾಗಿ ವಿಭಾಗವಾರು ಪ್ರಸ್ತಾವನೆಗಳನ್ನು ಕ್ರೋಢೀಕರಿಸಿ ದಿನಾಂಕ 03–11–2016ರ ಒಳಗೆ ಸಂಬಂಧಪಟ್ಟ ವಲಯ ಮುಖ್ಯ ಅಭಿಯಂತರರು ವಿಶೇಷ ಆಯುಕ್ತರು(ಯೋಜನೆಗಳು)ರವರಿಗೆ ಸಲ್ಲಿಸತಕ್ಕದ್ದು. ಹೀಗೆ ಸಲ್ಲಿಸಲ್ಪಟ್ಟ ಪ್ರಸ್ತಾವನೆಗಳ ಕಾಮಗಾರಿ ಸಂಖ್ಯೆ ಪ್ರಮಾಣಪತ್ರಗಳನ್ನು ವಲಯವಾರು ಕ್ರೋಢೀಕರಿಸಿ ಒಂದೇ ಬಾರಿಗೆ ಸಂಬಂಧಪಟ್ಟ ಮುಖ್ಯ ಅಭಿಯಂತರರ ಕಛೇರಿಗೆ ಕಳುಹಿಸಲು ವಿಶೇಷ ಆಯುಕ್ತರು (ಹಣಕಾಸು)ರವರಿಗೆ ಸೂಚಿಸಿದೆ.

14. ಕಾಮಗಾರಿಗಳು ಪೂರ್ಣಗೊಂಡ ನಂತರ ಬಿಲ್ ಪಾವತಿಯಲ್ಲಿ ಆದ್ಯತೆಯನ್ನು ನೀಡತಕ್ಕದ್ದು. ಮತ್ತು ಬಿಲ್ ಪಾವತಿ ಮಾಡುವ ಸಂದರ್ಭಗಳಲ್ಲಿ ಈ ಕಛೇರಿ ಆದೇಶ ಸಂಖ್ಯೆ ಪ್ರ.ಅ./ಪಿಆರ್/339/16–17 ದಿನಾಂಕ 04–08–2016ನ್ನು ಕಡ್ಡಾಯವಾಗಿ ಪಾಲಿಸುವುದು.

ಸಂಬಂಧಪಟ್ಟ ಎಲ್ಲ ಅಧಿಕಾರಿಗಳಿಗೆ ಸುಗಮ ವಾಹನ ಸಂಚಾರಕ್ಕೆ ಅನುವಾಗುವಂತೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ಸದರಿ ಕ್ರಮಗಳನ್ನು ನಿಯಮಿತ ಮತ್ತು ಕ್ಷಿಪ್ರವಾಗಿ ನಿರ್ವಹಿಸಿ ಮಾಧ್ಯಮಗಳಲ್ಲಿ ಪಾಲಿಕೆಯ ವಿರುದ್ಧ ಪ್ರತಿಕೂಲ ವರದಿಗಳು ವರದಿಯಾಗದಂತೆ ಕ್ರಮವಹಿಸಲು ಸೂಚಿಸಿದೆ. ಅಲ್ಲದೇ ಈ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಎಲ್ಲ ವಿವರಗಳನ್ನು ಪಾಲಿಕೆಯ ಜಾಲತಾಣಕ್ಕೆ ಅಪ್‌ಲೋಡ್ ಮಾಡಬೇಕಿರುತ್ತದೆ.

ಅನುಷ್ಠಾನ ಮತ್ತು ಮೇಲುಸ್ತುವಾರಿ ಜವಾಬ್ದಾರಿ ಹೊಂದಿರುವ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ ತೋರಿರುವುದು ಅಥವಾ ಆದೇಶವನ್ನು ಉಪೇಕ್ಷಿಸಿರುವುದು ಅಥವಾ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವುದು ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಗಳು

1. ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರಯೋಜನೆ ಸಚಿವರ ಅವಗಾಹನೆಗೆ ತರಲು ಮಾನ್ಯ ಸಚಿವರ ಆಪ್ತ ಶಾಖೆಗೆ ಕಳುಹಿಸಿದೆ.
2. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಪೂಜ್ಯ ಮಹಾಪೌರರ ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಮಾನ್ಯ ಉಪ ಮಹಾಪೌರರ ಆಪ್ತ ಶಾಖೆಗೆ ಕಳುಹಿಸಿದೆ.
4. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆರವರಿಗೆ ಸಲ್ಲಿಸಿದೆ.
5. ವಿಶೇಷ ಆಯುಕ್ತರು(ಯೋಜನೆಗಳು), ಬೃಬೆಂಮಪಾ – ಸೂಕ್ತ ಕ್ರಮಕ್ಕಾಗಿ
6. ವಿಶೇಷ ಆಯುಕ್ತರು (ಹಣಕಾಸು), ಬೃಬೆಂಮಪಾ – ಸೂಕ್ತ ಕ್ರಮಕ್ಕಾಗಿ
7. ಎಲ್ಲ ವಲಯಗಳ ಜಂಟಿ ಆಯುಕ್ತರು/ಮುಖ್ಯ ಅಭಿಯಂತರರು – ಸೂಕ್ತ ಕ್ರಮಕ್ಕಾಗಿ
8. ಪ್ರಧಾನ ಅಭಿಯಂತರರು, ಬೃಬೆಂಮಪಾ – ಸೂಕ್ತ ಕ್ರಮಕ್ಕಾಗಿ
9. ಐಟಿ ಸಲಹೆಗಾರರು, ಬೃಬೆಂಮಪಾ ಸೂಕ್ತ ಕ್ರಮಕ್ಕಾಗಿ ಮತ್ತು ಪಾಲಿಕೆ ಜಾಲತಾಣದಲ್ಲಿ ಈ ಆದೇಶವನ್ನು ಪ್ರಚುರ ಪಡಿಸುವುದಕ್ಕಾಗಿ
10. ಕಛೇರಿ ಕಡತಕ್ಕೆ

Scanned by CamScanner

ಬಿ.ಬಿ.ಎಂ.ಪಿ. ಮುಖ್ಯ ಕಾರ್ಯಾಲಯ
ಸ್ವೀಕೃತಿ ಸಂಖ್ಯೆ: (1) 6961
ದಿನಾಂಕ: 04/10/16

(8)

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 602 ಎಂಎನ್‌ವೈ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 03–10–2016.

ಇವರಿಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ,

ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.
Spl. Comm (Projects)

ಮಾನ್ಯರೆ,

ವಿಷಯ: ಬಿ.ಬಿ.ಎಂ.ಪಿ.ಗೆ ವಾರ್ಷಿಕವಾಗಿ ವಾರ್ಡ್‌ವಾರು ನಿಗಧಿಪಡಿಸಿರುವ ನಿರ್ವಹಣಾ ಅನುದಾನದಲ್ಲಿ ಶೇ.10 ರಷ್ಟು ಮೊತ್ತದಲ್ಲಿ ತುರ್ತು ಕಾಮಗಾರಿಗಳನ್ನು ಕೈಗೊಳ್ಳಲು ಕೆ.ಟಿ.ಪಿ.ಪಿ. ಕಾಯ್ದೆಯ 4(ಜಿ) ರಡಿ ವಿನಾಯಿತಿಯನ್ನು ನೀಡುವಂತೆ ಕೋರಿರುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಪ್ರಅ/ಪಿಆರ್/3393/2016–17, ದಿನಾಂಕ:04–08–2016.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಬಿ.ಬಿ.ಎಂ.ಪಿ.ಗೆ ವಾರ್ಷಿಕವಾಗಿ ವಾರ್ಡ್‌ವಾರು ನಿಗಧಿಪಡಿಸಿರುವ ನಿರ್ವಹಣಾ ಅನುದಾನದಲ್ಲಿ ಶೇ.10 ರಷ್ಟು ಮೊತ್ತದಲ್ಲಿ ತುರ್ತು ಕಾಮಗಾರಿಗಳನ್ನು ಕೈಗೊಳ್ಳಲು ಕೆ.ಟಿ.ಪಿ.ಪಿ. ಕಾಯ್ದೆಯ 4(ಜಿ) ರಡಿ ವಿನಾಯಿತಿಯನ್ನು ನೀಡುವಂತೆ ಕೋರಿರುವುದಕ್ಕೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯು ದಿನಾಂಕ: 03–10–2016 ರಂದು ಹೊರಡಿಸಿರುವ ಅಧಿಸೂಚನೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಆಗತ್ಯ ಕ್ರಮಕ್ಕಾಗಿ ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

ಸ್ವೀಕೃತಿ ಸಂಖ್ಯೆ: ಎನ್.ಸಿ./ಪಿ... 01670
ದಿನಾಂಕ: 20/10/16

ತಮ್ಮ ನಂಬುಗೆಯ,

(ಎನ್ ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.).

ಪ್ರಧಾನ ಲಾಭಾಂಶದಲ್ಲಿ ಸ್ವೀಕೃತಿ
ಸಂಖ್ಯೆ: 5084
ದಿನಾಂಕ: 3/11/16

3/11

3/11/16

Scanned by CamScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ವಿಶೇಷ ಆಯುಕ್ತರು (ಯೋಜನೆ) ರವರ ಕಛೇರಿ, ಪಾಲಿಕೆಯ ಮುಖ್ಯ ಕಛೇರಿಗಳು,
ನರಸಿಂಹರಾಜ ಚೌಕ, ಬೆಂಗಳೂರು-560 002.

ಸಂಖ್ಯೆ:ವಿ.ಆ(ಯೋ)/ಪಿಆರ್/5190 /16-17

ದಿನಾಂಕ: 18.10.16

ಅವಶ್ಯಕತೆಯ ಪ್ರತಿಗೆ

ಎಲ್ಲಾ ಮುಖ್ಯ ಅಭಿಯಂತರರು (ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ಶ್ರೀರಾಜರಾಜೇಶ್ವರಿ ನಗರ, ಮಹದೇವಪುರ, ದಾಸರಹಳ್ಳಿ, ಯಲಹಂಕ, ರಸ್ತೆ ಮೂಲಭೂತ ಸೌಕರ್ಯ)

ಆಂತರಿಕ ಕಛೇರಿ ಟಿಪ್ಪಣಿ

ವಿಷಯ: ವಾರ್ಷಿಕವಾಗಿ ವಾರ್ಡ್‌ವಾರು ನಿಗಧಿಪಡಿಸುವ ನಿರ್ವಹಣಾ ಅನುದಾನದಲ್ಲಿ ಕೇ. 10 ರಷ್ಟು ಮೊತ್ತದಲ್ಲಿ ತುರ್ತು ಕಾಮಗಾರಿಗಳನ್ನು ಕೈಗೊಳ್ಳಲು ಕಟಿಪಿಪಿ ಕಾಯ್ದೆ 4(ಜ) ರಡಿ ವಿನಾಯಿತಿ ನೀಡಲು ಕೋರಿರುವ ಬಗ್ಗೆ.

ಉಲ್ಲೇಖ: 1. ಪಾಲಿಕೆಯ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಸಭೆಯ ದಿ:13-07-2016 ರ ಪಡುಮಳಿಗಳು.
2. ಮಾನ್ಯ ಆಯುಕ್ತರುರವರ ಪತ್ರ ಸಂಖ್ಯೆ:3393/2016-17, ದಿ:04-08-2016
3. ಸರ್ಕಾರದ ಅರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ/840/ಜೆಚ್ಚ-12/16, ದಿ:03-10-2016

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (2) ರಲ್ಲಿ ಪಾಲಿಕೆಯ ವ್ಯಾಪ್ತಿಗೆ ಬರುವ ಹಲವು ಆದೇಶಗಳಲ್ಲಿ ಇತ್ತೀಚಿಗೆ ಸುರಿದ ಬಾರಿ ಮಳೆಯಿಂದಾಗಿ ರಸ್ತೆಗಳು ಹಾಳಾಗಿರುವ ಕಾರಣದಿಂದ 2016-17 ನೇ ಸಾಲಿನ ಆಯವ್ಯದಲ್ಲಿ ಲೆಕ್ಕ ಶೀರ್ಷಿಕೆ ಪಿ-1771 ರ ಅಡಿಯಲ್ಲಿ ವಲಯ ಕಾಮಗಾರಿ- ವಾರ್ಡ್‌ವಾರು ನಿರ್ವಹಣೆಗೆ ಹಳೆ ವಾರ್ಡ್‌ಗಳಿಗೆ ತಲಾ ರೂ.2.00 ಕೋಟಿ ಹಾಗೂ ಹೊಸ ವಾರ್ಡ್‌ಗಳಿಗೆ ತಲಾ ರೂ.3.00 ಕೋಟಿ ಮೊತ್ತವನ್ನು ಮೀಸಲಿರಿಸಿದ್ದು ಇದರ ಪೈಕಿ ಕೇ.10.00 ರಷ್ಟು ಮೊತ್ತವನ್ನು ತುರ್ತು ಕಾಮಗಾರಿಗಳಿಗೆ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದ್ದು ಈ ಮೊತ್ತದಲ್ಲಿ ರಸ್ತೆ ಮರುಸ್ಥಿ (ರಸ್ತೆ ಗುಂಡಿಗಳ ಮುಚ್ಚುವಿಕೆ, ಮೋರಿಗಳಲ್ಲಿ ಹೂಳು ತೆಗೆಯುವುದು, ರಸ್ತೆ ಅಗೆತದ ಮುಚ್ಚುವಿಕೆ, ಇತ್ಯಾದಿ) ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಲು ಕಟಿಪಿಪಿ ಕಾಯ್ದೆಯ 4(ಜ) ರ ಅಡಿ ಅಗತ್ಯ ವಿನಾಯಿತಿಯನ್ನು ನೀಡಲಾಗಿದ್ದು ಈ ವಿಷಯದಲ್ಲಿ ಈ ಕೆಳಕಂಡ ಪರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಕಾರ್ಯಗಳನ್ನು ಪೂರ್ಣಗೊಳಿಸಲು ಆದೇಶಿಸಿದೆ.

1. ರಸ್ತೆಗಳಿಗೆ defects liability period ಜಾರ್ತಿಯಲ್ಲಿರುವುದಕ್ಕೆ ಕರಾರು ಪತ್ರದಂತೆ ಸಂಬಂಧಪಟ್ಟ ಗುತ್ತಿಗೆದಾರರಿಂದಲೇ ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ.
2. ಸ್ಪಷ್ಟ ಕಾರ್ಯಗಳನ್ನು ಪರತ್ತು (1) ರಲ್ಲಿ ಸೂಕ್ತವಾಗಿ ಪಾಲಿಸಿ ಯಾವುದೇ ಉಲ್ಲಂಘನೆ ಆಗದಂತೆ ಕ್ರಮವಹಿಸಬೇಕಾಗಿರುತ್ತದೆ.
3. ಕಾರ್ಯಗಳನ್ನು ಕೈಗೊಳ್ಳುವ ಮುನ್ನ ರಸ್ತೆಗಳನ್ನು ಗುರುತಿಸಿಕೊಂಡು ಪ್ರಾರಂಭವಾಗುವ ಮುನ್ನ ಹಾಗೂ ಪೂರ್ಣಗೊಂಡ ನಂತರ ಛಾಯ ಚಿತ್ರಗಳನ್ನು (GIS mapping with date) ತೆಗೆದು ದೃಢೀಕರಿಸಿ ವರದಿಗೆ ಸಲ್ಲಿಸಬೇಕಾಗಿರುತ್ತದೆ.
4. ಈ ಕಾರ್ಯಗಳನ್ನು ವಲಯದಲ್ಲಿರುವ ಎಲ್ಲಾ ರಸ್ತೆಗಳಲ್ಲಿ- ರಸ್ತೆ ಗುಂಡಿಗಳ ಮುಚ್ಚುವಿಕೆ, ಮೋರಿಗಳಲ್ಲಿ ಹೂಳು ತೆಗೆಯುವುದು, ರಸ್ತೆ ಅಗೆತದ ಮುಚ್ಚುವಿಕೆ, ಇತ್ಯಾದಿಗಳನ್ನು ಪೂರ್ಣಪ್ರಮಾಣದಲ್ಲಿ ತುರ್ತಾಗಿ ಹಾಗೂ ನಿಯಮಬದ್ಧವಾಗಿ ಕೈಗೊಳ್ಳುವುದು ಅವಶ್ಯಕವಾಗಿರುತ್ತದೆ.

ಮೇಲ್ಕಂಡ ಪರತ್ತುಗಳನ್ನು ಉಲ್ಲಂಘಿಸಿದಲ್ಲಿ ಇದ್ದ ಅಧಿಕಾರಿಗಳ ಮೇಲೆ ಸಕ್ಷಮ ಪ್ರಾಧಿಕಾರವು ಶಿಸ್ತಿನ ಕ್ರಮವನ್ನು ಜರುಗಿಸಲಾಗುವುದೆಂದು ಸೂಚನೆ ನೀಡಿದೆ.

21 OCT 2016

ವಿಶೇಷ ಆಯುಕ್ತರು (ಯೋಜನೆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು
1. ಮಾನ್ಯ ಆಯುಕ್ತರುರವರಿಗೆ ಕ್ರಮಾರ್ಥವಾಗಿ ಸಲ್ಲಿಸಿದೆ.
2. ಪ್ರಧಾನ ಅಭಿಯಂತರರು (ರವರಿಗೆ ಮಾಹಿತಿಗಾಗಿ.

Scanned by CamScanner